SECRETARY'S REPORT

SECRETARY :—I beg to lay on the table of the House, a statement showing the bill which has received the assent of the President.

SUPPLEMENTARY STATEMENT SHOWING THE BILL ASSENTED TO BY THE PRESIDENT

Name of the Bill	Date of Assent	Assented by
The Mysore Land Reforms (Amendment) Bill, 1973	23-2-1974	President

ISSUE OF AN ORDINANCE DURING THE SESSION PERIOD.

ISSUE OF AN ORDINANCE AFTER THE DATE OF FIXING THE MEETING OF THE HOUSE.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : On a point of order, Sir

ಸರ್ಕಾರದವರು ಏನೊಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ ಅದು ಈ ಶಾಸನ ಸಭೆ ಸೇರತಕ್ಕಂಥಹ ದಿನವನ್ನು ಗೊತ್ತು ಮಾಡಿದ ಮೇಲೆ ಹೊರಡಿಸಿದಂತಹ ಆಜ್ಞೆ. ಇದನ್ನು ನೋಡಿದರೆ ಸರ್ಕಾರದವರು ಈ ಶಾಸನ ಸಭೆಗೆ ಇರತಕ್ಕಂತಹ ಪರಮಾಧಿಕಾರವನ್ನು ಕತ್ತು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಕಾಣುತ್ತದೆ. ಆದ್ದರಿಂದ ಇದನ್ನು ಆ ರೀತಿ ಹೊರಡಿಸುವುದಕ್ಕೆ ಅಂಥ ಸನ್ನಿವೇಶ ಏನಿತ್ತು ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಕೃಷ್ಣ.—1969ನೇ ಇಸವಿಯಲ್ಲಿ ಲೋಕಸಭೆಯು ಸೇರುವ 48 ಗಂಟೆಗಳ ಮೊದಲು ಕೇಂದ್ರ ಸರ್ಕಾರದವರು ಬ್ಯಾಂಕ್ ರಾಷ್ಟ್ರೀಕರಣ ಮಾಡುವ ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಇದು ಮಾನ್ಯ ಸದಸ್ಯರಿಗೆ ಜ್ಞಾಪಕ ಇರಬಹುದು. ಅದನ್ನು ಎಲ್ಲರೂ ಸಮರ್ಥನೆ ಮಾಡಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ಈ ಸದನಕ್ಕೆ ಇರುವ ಪರಮಾಧಿಕಾರವನ್ನು ಕತ್ತು ಹಾಕತಕ್ಕ ಉದ್ದೇಶ ಯಾವುದೂ ಇಲ್ಲ. ಮುಂದೆ ಇದು ಸಭೆಯು ಮುಂದೆ ಚರ್ಚೆಗೆ ಸಹ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಇದೇ ಒಂದು ಸನ್ನಿವೇಶ ಲೋಕಸಭೆಯಲ್ಲಿ ಬಂದಾಗ ಅಲ್ಲಿಯ ಅಧ್ಯಕ್ಷರು ಅದರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿ

(ಶ್ರೀ ಕಾಗೋಡು ತಿಮ್ಮಪ್ಪ)

ಇಂಥ ಪ್ರವೃತ್ತಿಯನ್ನು ಸರ್ಕಾರದವರು ಕೈಬಿಡಬೇಕೆಂದು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ. ಆದ್ದರಿಂದ ಇಲ್ಲಿಸಹ ತಾವು ಅಧ್ಯಕ್ಷರು ಅಂಥ ಪ್ರವೃತ್ತಿಯನ್ನು ಇನ್ನು ಮುಂದಾದರೂ ಕೈಬಿಡಬೇಕೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡ ಬೇಕು. ಆ ಒಂದು ಸಂಪ್ರದಾಯವನ್ನು ನಾವು ಇಲ್ಲಿಯೂ ಬೆಳೆಸಿಕೊಂಡು ಬರಬೇಕು. ಅದಕ್ಕೆ ತಾವು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರೆ ಆ ಸಂಪ್ರದಾಯ ಇಲ್ಲಿ ಮುಂದೆಯೂ ಬೆಳೆದುಕೊಂಡು ಬರುತ್ತದೆ.

ಅಧ್ಯಕ್ಷರು :- ಅಲ್ಲಿಯ ಅಧ್ಯಕ್ಷರು ಹಾಗೆ ಹೇಳಿರುವುದು ನಿಜ. ಅದರ ಅವಶ್ಯಕತೆ ನೋಡಿಕೊಂಡು ಹಾಗೆ ಆರ್ಡಿನೆನ್ಸ್ ಹೊರಡಿಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :- ಮಾನ್ಯ ಮಂತ್ರಿಯವರು ಬ್ಯಾಂಕ್ ರಾಷ್ಟ್ರೀಕರಣದ ವಿಷಯ ಹೇಳಿದರು. ಅದು ಅರ್ಥಿಕ ನೀತಿಗೆ ಸಂಬಂಧಪಟ್ಟ ವಿಚಾರ. ಅದಕ್ಕೂ ಇದಕ್ಕೂ ಹೋಲಿಸುವುದಕ್ಕಾಗುವುದಿಲ್ಲ. ಆದರೆ ಇಂಥ ವಾಲಿಗಳು ಈ ರೀತಿಯ ಸುಗ್ರೀವಾಜ್ಞೆಗಳನ್ನು ಮೇಲಿಂದ ಮೇಲೆ ತೆಗೆದುಕೊಂಡು ಬಂದರೆ ಜನರ ಗತಿ ಏನಾಗಬೇಕು ?

ಶ್ರೀ ಎನ್. ರಾಚಯ್ಯ :- ಅಧ್ಯಕ್ಷರೆ, ಕೆಲವು ತಾಲ್ಲೂಕು ಬೋರ್ಡುಗಳಲ್ಲಿ ಅಧಿಕಾರಿಗಳು ತೆಗೆದುಕೊಂಡ ಕೆಲಸಕಾರ್ಯಗಳನ್ನು ನಾವು ತುರ್ತಾಗಿ ಸಕ್ರಮ ವಾಗಿ ಮಾಡಬೇಕಾಗಿದ್ದುದರಿಂದ ಇದನ್ನು ತರಬೇಕಾಯಿತು. ಇಲ್ಲದಿದ್ದರೆ ಆ ಮೂರು ತಾಲ್ಲೂಕು ಬೋರ್ಡುಗಳಲ್ಲಿ ಅಧಿಕಾರಿ ವರ್ಗದವರು ತೆಗೆದುಕೊಂಡ ಕ್ರಮಗಳಿಂದ ಅಲ್ಲಿಯ ಜನತೆಗೆ ಬಹಳ ತೊಂದರೆಯುಂಟಾಗುತ್ತಿತ್ತು. ಅದ ಕ್ಕೋಸ್ಕರ ಈ ಜರೂರು ಶಾಸನವನ್ನು ತರಬೇಕಾಯಿತು. ಇಲ್ಲದಿದ್ದರೆ ತರುತ್ತಾ ಇರಲಿಲ್ಲ. ಅದು ಬಿಟ್ಟು, ಈ ಶಾಸನ ಸಭೆ ಸೇರಿದ ಮೇಲೆ ತಮ್ಮ ಅನುಮತಿ ತೆಗೆದುಕೊಂಡು ಅದನ್ನು ಸಕ್ರಮಗೊಳಿಸಿದ್ದರೆ ಅದರಿಂದ ಉಂಟಾಗಬಹುದಾದ ಅನಾಹುತಗಳಿಗೆ ಸರ್ಕಾರವೇ ಅವಕಾಶ ಕೊಟ್ಟಂತಾಗಿ, ತಮ್ಮೆಲ್ಲರ ಟೀಕೆಗೂ ಗುರಿಯಾಗಬೇಕಾಗಿತ್ತು. ಅವೆಗೆಳೆಲ್ಲವನ್ನೂ ಅರಿತು ರಾಜ್ಯಪಾಲರು ಇಂಥ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ. ಆ ಮೇಲೆ ಇಲ್ಲಿ ಚರ್ಚೆಗೆ ಬಂದಾಗ ತಾವು ಏನು ಬೇಕಾದರೂ ಪ್ರಸ್ತಾಪ ಮಾಡಬಹುದು; ಅದಕ್ಕೆ ಸಮಂಜಸವಾದ ಉತ್ತರವನ್ನು ನಾನು ಕೊಡುತ್ತೇನೆ.

ಅಧ್ಯಕ್ಷರು :- ಈ ಅಧಿವೇಶನ ಸೇರುವುವಕ್ಕೆ ಸಮಯ ಮತ್ತು ತಾರೀಕು ಗೊತಾದ ಮೇಲೆ ಸರ್ಕಾರ ಆರ್ಡಿನೆನ್ಸ್ ಹೊರಡಿಸುವುದು ಒಳ್ಳೆಯದಲ್ಲವೆಂದು

ಲೋಕಸಭೆಯ ಅಧಕ್ಷರು ಹೇಳಿದ್ದಾರೆ. ನಮ್ಮ ಸರ್ಕಾರದವರೂ ಅದನ್ನೂ ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದು.

ಶ್ರೀ ಎನ್. ರಾಚಯ್ಯ :- ಸಾಧ್ಯವಾದಷ್ಟು ನಾವು ಅದಕ್ಕೆ ಆದ್ಯತೆಯನ್ನು ಕೊಡುತ್ತೇವೆ.

PAPERS LAID ON THE TABLE

SRI N. RACHAIAH (Minister for Community Development and Social Welfare) :—I beg to lay the Karnataka Village Panchayats and Local Boards (Amendment) Ordinance, 1974, Ordinance No. 2 of 1974 as required under clause (2) (a) of article 213 of the Constitution of India.

(ii) SRI K. H. RANGANATH :—(Minister for Transport and Housing).—I beg to lay a statement as required under rule 70 (2) of the Rules of Procedure and Conduct of Business in the Legislative Assembly in respect of the Karnataka Housing Board (Amendment) Ordinance, 1973.

MADAM SPEAKER :—The ordinance and the statement are placed on Table of the House.

AMENDMENTS TO THE RULES OF PROCEDURE AND CONDUCT OF BUSINESS IN THE MYSORE LEGISLATIVE ASSEMBLY.

SRI S. M. KRISHNA : (Minister for Industries and Parliamentary Affairs) I beg to move :

> "In the Rules of Procedure and Conduct of Business in the Mysore Legislative Assembly for the word "Mysore" wherever it occurs, the word 'Karnataka' shall be substituted."